ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. 080-22372738 E-mail: nregs-ka@nic.in

ಗ್ರಾಅಪ 418 ಉಖಾಯೋ -2012

ದಿನಾಂಕ: 17-10-2015

ಗೆ

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯದ ಘೋಷಿತ ಬರಪೀಡಿತ ತಾಲ್ಲೂಕುಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಪ್ರತಿ ಕುಟುಂಬಕ್ಕೆ 100 ಉದ್ಯೋಗ ದಿನಗಳಿಗೆ ಮೇಲ್ಪಟ್ಟು ಉದ್ಯೋಗ ದಿನಗಳನ್ನು ಹೆಚ್ಚುವರಿಯಾಗಿ ಒದಗಿಸಲು ಅವಕಾಶ ಕಲ್ಪಿಸುವ ಬಗ್ಗೆ.

ಉಲ್ಲೇಖ: 1. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು ಇವರ ಪತ್ರದ ಸಂಖ್ಯೆ: J-11018/1/2/2015/MGNREGA-IV ದಿನಾಂಕ: 21-09-2015

2. ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ 418 ಉಖಾಯೋ 2012 ದಿನಾಂಕ: 14-09-2015 ಮತ್ತು ಸಮಸಂಖ್ಯೆಯ ದಿನಾಂಕ: 19-08-2015

~~~~~~

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರನ್ವಯ ತಮಗೆ ತಿಳಿದಂತೆ, ರಾಜ್ಯದಲ್ಲಿ 27 ಜಿಲ್ಲೆಗಳ 136 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಸರ್ಕಾರವು ಘೋಷಿಸಿರುತ್ತದೆ. ಈ ಸಂಬಂಧ, ಸದರಿ ಬರಪೀಡಿತ ಪ್ರದೇಶಗಳಲ್ಲಿರುವ ಗ್ರಾಮೀಣ ಜನರಿಗೆ, ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ಪ್ರಸ್ತುತ ಇರುವ 100- ಉದ್ಯೋಗ ದಿನಗಳನ್ನು 150 ದಿನಗಳಿಗೆ ಹೆಚ್ಚಿಸಿ, ಆದೇಶಿಸುವಂತೆ ಪ್ರಸ್ತಾವನೆಯನ್ನು ಶಿಫಾರಸ್ಸಿನೊಂದಿಗೆ, ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು, ಇದಕ್ಕೆ ಉತ್ತರವಾಗಿ, ಕೇಂದ್ರ ಸರ್ಕಾರವು ಉಲ್ಲೇಖ(1)ರಲ್ಲಿ 50 ಉದ್ಯೋಗ ದಿನಗಳನ್ನು ಹೆಚ್ಚುವರಿಯಾಗಿ ಷರತ್ ಬದ್ಧವಾಗಿ ಆದೇಶ ನೀಡಿದೆ. ಸದರಿ ಪತ್ರದ ಪ್ರತಿಯನ್ನು ಹಾಗೂ ಇದರ ಆಂಗ್ಲಭಾಷೆಯನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿರುವ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.

ಕೂಡಲೇ, ತಮ್ಮ ಅಧೀನದಲ್ಲಿ ಬರುವ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಇದರ ಸಂಬಂಧ 100 ದಿನಗಳನ್ನು ಪೂರೈಸಿರುವ ಕುಟುಂಬಗಳಿಗೆ ಹೆಚ್ಚುವರಿಯಾದ ಉದ್ಯೋಗ ದಿನಗಳಿಗೆ ಉದ್ಯೋಗವನ್ನು ನೀಡುವಂತೆ. ಅರ್ಜಿಸಲ್ಲಿಸಲು ಪ್ರೇರಿಪಿಸುವುದು/ಮನವೊಲಿಸುವುದು ಮತ್ತು ಅರ್ಜಿಸಲ್ಲಿಸಿದವರಿಗೆ ಯಾವುದೇ ಕಾರಣಕ್ಕೂ ನಿರಾಕರಿಸದೇ ಉದ್ಯೋಗವನ್ನು
~~~~~~

ನೀಡಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಈ ಮೂಲಕ ಕೋರಿದೆ. ಈ ಅವಧಿಯಲ್ಲಿ, ವ್ಯಕ್ತಿಗತ ಫಲಾನುಭವಿಗಳಿಗೆ ಸರ್ಕಾರದಿಂದ ತಿಳಿಸಿರುವ ವಿವಿಧ ಪ್ಯಾಕೇಜುಗಳ ಕಾಮಗಾರಿಗಳ ಸೌಲಭ್ಯಗಳನ್ನು ಒದಗಿಸಲು ಹಾಗೂ ಮಾನವ ದಿನಗಳನ್ನು ಅನುಷ್ಠಾನಿಸಲು ಕ್ರಮಕೈಗೊಳ್ಳುವಂತೆ ಕೋರಿದೆ. 100 ದಿನಗಳಿಗಿಂತ, ಹೆಚ್ಚುವರಿಯಾಗಿ ಉದ್ಯೋಗ ದಿನಗಳನ್ನು (150 ದಿನಗಳವರೆಗೆ ಮಾತ್ರ) ನಿರ್ವಹಿಸಿದ ಕೂಲಿ ಕಾರ್ಮಿಕರ e-NMR ಮಾಹಿತಿಯನ್ನು NREGA-MIS softನಲ್ಲಿ ಆರೋಹಣ ಮಾಡಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು.

ಕೂಡಲೇ ಆಡಳಿತ ಯಂತ್ರವನ್ನು ಚುರುಕುಗೊಳಿಸಿ ಯೋಜನೆಯನ್ನು ಅನುಷ್ಠಾನಗೊಳಿಸಿ ಗ್ರಾಮೀಣ ಜನರು ನಗರ ಪ್ರದೇಶಗಳಿಗೆ ವಲಸೆ ಹೋಗದಂತೆ ಉದ್ಯೋಗವನ್ನು ಒದಗಿಸಲು ಕ್ರಮಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ. ತಾವು ಆದಷ್ಟು ಗರಿಷ್ಠ ಪ್ರಮಾಣದಲ್ಲಿ ಮಾನವ ದಿನಗಳನ್ನು ಸೃಜನೆ ಮಾಡಿ, ಪ್ರಸ್ತುತ ಸಾಲಿನಲ್ಲಿ ನರೇಗಾ ಯೋಜನೆಗೆ ನಿಗಧಿಪಡಿಸಿದ ಅನುದಾನವನ್ನು ಕೇಂದ್ರ ಸರ್ಕಾರದಿಂದ ಕಡಿತವಾಗದಂತೆ ನಾವು ಕ್ರಮವಹಿಸಬೇಕಾಗುತ್ತದೆ. ಈ ಕುರಿತು ಕೇಂದ್ರ ಸರ್ಕಾರದಿಂದ ಹಿರಿಯ ಅಧಿಕಾರಿಗಳು ನರೇಗಾ ಯೋಜನೆಯ ಪ್ರಗತಿಯ ನಿರ್ವಹಣೆಯ ಬಗ್ಗೆ ಪರಿಶೀಲಿಸಲು, ಸದ್ಯದಲ್ಲಿಯೇ, ರಾಜ್ಯಕ್ಕೆ ಭೇಟಿ ನೀಡಲಿರುವರು. ಆದ್ದರಿಂದ, ತಾವು ಅವಿರತವಾಗಿ ಯೋಜನೆಗೆ ನಿಗಧಿಪಡಿಸಿದ, ಅನುದಾನವು ಕಡಿತವಾಗದಂತೆ ಶ್ರಮಿಸಲು ಎಲ್ಲಾ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವಿರಿ ಎಂದು ತಮ್ಮಿಂದ ನಿರೀಕ್ಷಿಸುತ್ತೇನೆ.

ತಮ್ಮ ವಿಶ್ವಾಸಿ,

ಮುನೀಷ್ ಮೌದ್ಗಿಲ್
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

***ಪ್ರತಿಯನ್ನು, ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:***

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಗಳಿಗೆ
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳಿಗೆ
6. ವಿಶೇಷ ಆಯುಕ್ತರು ಎಮ್.ಜಿ.ಎನ್.ಆರ್.ಇ.ಜಿ.ಎ/ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
7. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿಯ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು–570011
8. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು

9. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು
10. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಯುಕ್ತಾಲಯದ ಎಲ್ಲಾ ಅಧಿಕಾರಿಗಳಿಗೆ
11. ರಾಜ್ಯದ ಎಲ್ಲಾ ಜಿಲ್ಲೆಗಳ ಒಂಬುಡ್ಸ್‌ಮನ್‌ಗಳಿಗೆ
12. ವಿಶೇಷಾಧಿಕಾರಿಗಳು, ಗಣಕ ಯಂತ್ರ ಕೋಶ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸದರಿ ಮಾಹಿತಿಯನ್ನು ಇಲಾಖಾ ಅಂತರ್ ಜಾಲದಲ್ಲಿ ಅಳವಡಿಸಲು ಕೋರಿದೆ.
13. ಶ್ರೀ. ವೈ. ಮಹಾಂಕಾಳಪ್ಪ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳವರ ಮಾಹಿತಿಗಾಗಿ ಹಾಗೂ ಇದನ್ನು ಕರ್ನಾಟಕ ವಿಕಾಸದಲ್ಲಿ ಪ್ರಕಟಿಸಲು ಕೋರಿದೆ.
14. M/s Effia Technologies, ಅವರಿಗೆ www.end2endsolutions.comನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
15. ಹೆಚ್ಚಿನ ಪ್ರತಿಗಳು/ಮಹಾ ಕಡತಕೆ

**MOST IMMEDIATE/**
**BY FAX/SPEED POST**

No.J-11018/1/2/2015/MGNREGA-IV
Ministry of Rural Development
Department of Rural Development
(Mahatma Gandhi NREGA Division)

Krishi Bhavan, New Delhi 110 001
Dated 21th September, 2015

To

Principal Secretary
Department of Panchayati Raj & Rural Development
Government of Karnataka
Bangalore

**Subject: Provision for additional employment over and above 100 days per household under Mahatma Gandhi National Rural Employment Guarantee Act (MGNREGA) in notified drought affected talukas of Karnataka reg.**

**I. Background**

The State Government of Karnataka has already declared 136 talukas (listed in the Annexure) as drought affected, under relevant State regulations. As a result of the adverse affect on agriculture operations in these areas, there is a likelihood of increased demand for wage employment on public works.

**II. Special dispensation in drought affected talukas**

1. Currently, funds are provided to States under Section 22 of MGNREG Act for meeting the cost of employment upto 100 days per household in a financial year. As per the funding pattern, the Central Government funds the entire cost of unskilled employment upto 100 days per household and 75% of the corresponding cost of materials (including semi-skilled and skilled employment). The cost of employment over and above 100 days, if any, is borne by respective State Governments.

2. In view of the likelihood of increased demand for employment on public works due to the drought situation, it has been decided, under Section 3(4) of MGNREGA, to provide upto 50 days of additional employment in notified drought affected Talukas in the financial year 2015-16.

3. This additionality is subject to the following conditions:

(i) There is a Labour Budget (LB) which has been agreed to by the states and Central Government for the current financial year. LB includes an approved Shelf of Projects. Works will be taken up from this approved shelf. Initially, funds will be provided to States as per agreed to LB from where they will continue to meet the expenditure on account of providing employment upto 100 days and also for the increased number of days in notified areas;

(ii) If the approved shelf of projects in the agreed to LB is not adequate for meeting the increased demand for employment, a supplementary list, in accordance with the procedure to be followed for preparing the shelf of projects, will be prepared. However, works specified in para 4 of Schedule I of the Act as notified on 3rd January, 2014 may be considered for inclusion in the supplementary list. Priority for works in the supplementary list shall be determined by each Gram Panchayat in meetings of the Gram Sabha and the Ward Sabha. However, states will make efforts to convince Gram Sabhas/ Gram Panchayats to give higher priority to drought proofing works including works relating to water and soil conservation in line with the objectives of Pradhan Mantri Krishi Sinchayee Yojana (PMKSY);

(iii) Proposals for a revision of LB, if required, may be submitted by States in the same format and following the same procedure as for original LB. Based on an assessment of demand for employment, potential for providing employment on ongoing works and other factors, the Empowered Committee Chaired by Secretary, Department of Rural Development will take a decision on the proposal;

(iv) All other non-negotiables (conditions on use of machinery, wage material ratio, ban on contractors etc) and the stipulated processes in MGNREGA (such as 50% of the works in terms of cost to be assigned to Panchayats for implementation, wage rate, muster rolls, Social Audit, etc) will continue to apply.

## III. MIS

(i) Currently, NREGASoft does not allow data entries for employment above 100 days to a HH in a financial year unless specifically requested for by the State. In view of the decision referred to above, NREGASoft is being appropriately modified to allow entries for employment to registered HHs upto 150 days in notified Talukas.

(ii) In addition to the existing arrangements for keeping details of employment upto 100 days, NREGASoft will keep separate details of expenditure on account of employment cost (wages and material separately) upto 50 days beyond the stipulated 100 days.

**IV. Audit of Accounts and SEGF**

The scheme funds including SEGF will be audited in accordance with the provisions of the Act and instructions/guidelines issued by the Central Government from time to time. Accounts of Implementing Agencies and SEGF will show separately, expenditure incurred on account of raising the limit from 100 to 150 days. The Auditor will also certify whether the funds released have been utilized in accordance with the norms/guidelines and whether funds required to be credited by States in SEGF have been done or not.

Yours faithfully,

28/9/15

(Aparajita Sarangi)
Joint Secretary to the Government of India
Phone 011-23383553
Fax:: 011-23388207

Copy to

1. The Secretary, Ministry of Agriculture & Farmers' Welfare, Government of India
2. Senior Director (Technical), NIC, Department of Rural Development, Ministry of Rural Development to take necessary action in respect of MIS
3. All Officers/Sections/Consultants in MGNREGA Division of Department of Rural Develolpment, Ministry of Rural Development, Krishi Bhavan, New Delhi, to take necessary follow-up action

ಸಂಖ್ಯೆ J-11018/1/2/2015/MGNREGA-IV
ಗ್ರಾಮೀಣಾಭಿವೃದ್ಧಿ ಮಂತ್ರಾಲಯ
ಗ್ರಾಮೀಣಾಭಿವೃದ್ಧಿ ಇಲಾಖೆ
(ಮಹಾತ್ಮ ಗಾಂಧಿ ನರೇಗಾ ವಿಭಾಗ)

ಕೃಷಿಭವನ, ನವದೆಹಲಿ-110001
ದಿನಾಂಕ: 21-09-2015

ಗೆ
ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು

ವಿಷಯ: ಕರ್ನಾಟಕ ರಾಜ್ಯದ ಘೋಷಿತ ಬರಪೀಡಿತ ತಾಲ್ಲೂಕುಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಪ್ರತಿ ಕುಟುಂಬಕ್ಕೆ 100 ಉದ್ಯೋಗ ದಿನಗಳಿಗೆ ಮೇಲ್ಪಟ್ಟು ಉದ್ಯೋಗ ದಿನಗಳನ್ನು ಹೆಚ್ಚುವರಿಯಾಗಿ ಒದಗಿಸಲು ಅವಕಾಶ ಕಲ್ಪಿಸಿರುವ ಬಗ್ಗೆ.

## I. *ಹಿನ್ನಲೆ*

ರಾಜ್ಯದಲ್ಲಿರುವ ಕಾನೂನು ನಿಯಮಗಳ ಅನ್ವಯ ಕರ್ನಾಟಕ ರಾಜ್ಯ ಸರ್ಕಾರವು 136 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಿದೆ. ಇದರಿಂದ ಈ ಪ್ರದೇಶಗಳಲ್ಲಿ ಕೃಷಿ ಕಾರ್ಯಾಚರಣೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಮತ್ತು ಈ ಪ್ರದೇಶಗಳಲ್ಲಿ ಲೋಕೋಪಯೋಗಿ ಕಾಮಗಾರಿಗಳ ಮೇಲೆ ಕೂಲಿ ಉದ್ಯೋಗಕ್ಕಾಗಿ ಹೆಚ್ಚು ಬೇಡಿಕೆಗಳು ಸೃಷ್ಟಿಯಾಗುವ ಸಂಭವಗಳು ಹೆಚ್ಚಾಗಿ ಪರಿಣಮಿಸುತ್ತದೆ.

## II. *ಬರಪೀಡಿತ ತಾಲ್ಲೂಕುಗಳಲ್ಲಿ ವಿಶೇಷ ವಿನಾಯಿತಿ*

1. ~~ನರೇಗಾ ಅಧಿನಿಯಮದ~~ ಕಲಂ 22ರಡಿ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ 100 ದಿನಗಳ ಉದ್ಯೋಗವನ್ನು ಒದಗಿಸುವ ವೆಚ್ಚವನ್ನು ಭರಿಸುವುದಕ್ಕೆ ಪ್ರಸ್ತುತ ರಾಜ್ಯಗಳಿಗೆ ಅನುದಾನವನ್ನು ಒದಗಿಸಿದೆ. ನಿಧಿ ವಿಧಾನದ ಪ್ರಕಾರ ಪ್ರತಿ ಕುಟುಂಬಕ್ಕೆ 100 ದಿನಗಳವರೆಗೂ ಅಕುಶಲ ಉದ್ಯೋಗವನ್ನು ಒದಗಿಸುವ ವೆಚ್ಚವನ್ನು ಮತ್ತು ಶೇಕಡ 75ರಷ್ಟಿನ ಸಾಮಗ್ರಿ ವೆಚ್ಚವನ್ನು ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಭರಿಸುತ್ತದೆ. (ಅರೆ ಕುಶಲ ಮತ್ತು ಕೌಶಲ್ಯತೆಯ ಉದ್ಯೋಗವು ಸೇರಿದಂತೆ). 100 ದಿನಗಳಿಗೆ ಮೇಲ್ಪಟ್ಟಿರುವ ಉದ್ಯೋಗದ ವೆಚ್ಚವು ಇದ್ದಲ್ಲಿ ಆಯಾ ರಾಜ್ಯ ಸರ್ಕಾರಗಳು ಇದನ್ನು ಭರಿಸುವುದು/ಭರಿಸಬೇಕಾಗುತ್ತದೆ.
2. ಬರ ಪರಿಸ್ಥಿತಿಯಿಂದ ಲೋಕೋಪಯೋಗಿ ಕಾಮಗಾರಿಗಳಲ್ಲಿ ಉದ್ಯೋಗಕ್ಕೆ ಬೇಡಿಕೆಗಳು ಬರುವ ಸಂಭವಗಳು ಹೆಚ್ಚಾಗಿರುವ ನಿಟ್ಟಿನಲ್ಲಿ, 2015-16ನೇ ಆರ್ಥಿಕ ವರ್ಷದ ಸಾಲಿನಲ್ಲಿ ಘೋಷಿತ ಬರಪೀಡಿತ ತಾಲ್ಲೂಕುಗಳಲ್ಲಿರುವ ಕುಟುಂಬಗಳಿಗೆ ನರೇಗಾ ಅಧಿನಿಯಮದ ಕಲಂ 3(4) ಅಡಿಯಲ್ಲಿ 50 ದಿನಗಳನ್ನು ಹೆಚ್ಚುವರಿ ಉದ್ಯೋಗವಾಗಿ ಒದಗಿಸಲು ತೀರ್ಮಾನಿಸಿದೆ.
3. ಈ ಕೆಳಕಂಡ ಷರತ್ತುಗಳ ಅನುಪಾಲನೆಗೆ ಒಳಪಟ್ಟು ಹೆಚ್ಚುವರಿಯಾಗಿ ನೀಡಲಾಗಿದೆ.

    i. ಪ್ರಸ್ತುತ ಆರ್ಥಿಕ ವರ್ಷದ ಸಾಲಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೂಲಿ ಆಯವ್ಯಯವನ್ನು ಒಪ್ಪಿರುತ್ತದೆ. ಕೂಲಿ ಆಯವ್ಯಯದಲ್ಲಿ ಅನುಮೋದಿತ ಕಾರ್ಯಯೋಜನೆಗಳು ಸಹ ಸೇರಿರುತ್ತದೆ. ಈ ಅನುಮೋದಿತ ಕಾಮಗಾರಿಗಳ ಪಟ್ಟಿಯಿಂದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು. ಪ್ರಾರಂಭದಲ್ಲಿ ಅನುಮೋದಿತ ಕೂಲಿ ಆಯವ್ಯಯದಂತೆ ರಾಜ್ಯಗಳಿಗೆ ಅನುದಾನವನ್ನು ಒದಗಿಸಲಾಗುವುದು ಮತ್ತು ಅದರ

ಮೂಲಕ ಸತತವಾಗಿ 100 ದಿನಗಳವರೆಗಿನ ಉದ್ಯೋಗವನ್ನು ಒದಗಿಸುವ ವೆಚ್ಚ ಮತ್ತು ಅಧಿಸೂಚಿಸಿದ ಪ್ರದೇಶಗಳಲ್ಲಿ ಹೆಚ್ಚುವರಿಯಾದ ಉದ್ಯೋಗ ದಿನಗಳಿಗೆ ಆಗುವ ವೆಚ್ಚವನ್ನು ಭರಿಸಲಾಗುವುದು.

ii. ಉದ್ಯೋಗದ ಹೆಚ್ಚಿನ ಬೇಡಿಕೆಯನ್ನು ಪೂರೈಕೆ ಮಾಡಲು ಅಂಗೀಕರಿಸಿದ ಕೂಲಿ ಆಯವ್ಯಯದಲ್ಲಿ ಅನುಮೋದಿತ ಕಾಮಗಾರಿಗಳ ಗುಚ್ಛಗಳು ಸಾಲದೇ ಇದ್ದಲ್ಲಿ, ವಿಧಿವಿಧಾನಗಳನ್ನು ಅನುಸರಿಸಿ ಹೆಚ್ಚುವರಿ ಕಾಮಗಾರಿಗಳ ಗುಚ್ಛವನ್ನು ತಯಾರಿಸಿಕೊಳ್ಳುವುದು. ಕೇಂದ್ರ ಸರ್ಕಾರದವರು ದಿನಾಂಕ: 03-01-2014ರಂದು ಅಧಿಸೂಚಿಸಿರುವ ಅನುಸೂಚಿ-Iರ ಕಂಡಿಕೆ 4ರಲ್ಲಿ ನಿರ್ದಿಷ್ಟ ಪಡಿಸಲಾದ ಕಾಮಗಾರಿಗಳನ್ನು ಪೂರಕ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಪರಿಗಣಿಸುವುದು. ಪ್ರತಿ ಗ್ರಾಮ ಪಂಚಾಯತಿಯ ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಪೂರಕ ಪಟ್ಟಿಯಲ್ಲಿರುವ ಕಾಮಗಾರಿಗಳನ್ನು ಆದ್ಯತಿಕರೀಸಿ ಅನುಷ್ಠಾನಕ್ಕೆ ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸುವುದು. ಈ ಸಂಬಂಧ ರಾಜ್ಯಗಳು ಗ್ರಾಮ ಸಭೆ/ಗ್ರಾಮ ಪಂಚಾಯತ್‌ಗಳಿಗೆ ಮನವೊಲಿಸಿ, ಪ್ರಧಾನ ಮಂತ್ರಿ ಕೃಷಿ ಸಂಚಯ (PMKSY) ಉದ್ದೇಶಗಳಿಗೆ ಹೊಂದಿರುವಂತಹ ಜಲ ಮತ್ತು ಮಣ್ಣು ಸಂರಕ್ಷಣಾ ಕಾಮಗಾರಿಗಳು ಸೇರಿರುವಂತೆ, ಬರೆತಡೆಗಟ್ಟುವಿಕೆಯ ಕಾಮಗಾರಿಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಲು ಕ್ರಮವಹಿಸುವುದು.

iii. ಕೂಲಿ ಆಯವ್ಯಯವನ್ನು ಪರಿಷ್ಕರಿಸಲು ಅಗತ್ಯತೆ ಇದ್ದಲ್ಲಿ ಪ್ರಸ್ತಾವನೆಯನ್ನು ನಿಗಧಿತ ನಮೂನೆಯಲ್ಲಿ ರಾಜ್ಯಗಳು ಸಲ್ಲಿಸಿ, ಮೂಲ ಕೂಲಿ ಆಯವ್ಯಯದಲ್ಲಿ ಅನುಸರಿಸುವ ವಿಧಾನಗಳನ್ನೇ ಅನುಸರಣೆ ಮಾಡುವುದು. ಉದ್ಯೋಗ ಬೇಡಿಕೆಯ ಅಂದಾಜಿನ ಆಧಾರದ ಮೇಲೆ, ಇತರೆ ಅಂಶಗಳು ಮತ್ತು ಮುಂದುವರೆದ ಕಾಮಗಾರಿಗಳ ಮೇಲೆ ಉದ್ಯೋಗವನ್ನು ಒದಗಿಸುವ ಸಾಮರ್ಥ್ಯತೆಯ ಆಧಾರದ ಮೇಲೆ, ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಇಲಾಖೆಯವರ ಅಧ್ಯಕ್ಷತೆಯಲ್ಲಿ ನಡೆಯುವ ಅಧಿಕಾರಯುಕ್ತ ಸಮಿತಿಯಲ್ಲಿ ಈ ಪ್ರಸ್ತಾವನೆ ಕುರಿತು, ತೀರ್ಮಾನ ತೆಗೆದುಕೊಳ್ಳಲಾಗುವುದು.

iv. ಇತರೆ ಎಲ್ಲಾ ಅನುಸಂದಾನವಾಗದ ವಿಷಯಗಳು (ಯಂತ್ರಗಳ ಬಳಕೆಯ ಷರತ್ತುಗಳು, ಕೂಲಿ ಸಾಮಗ್ರಿ ಅನುಪಾತ ಗುತ್ತಿಗೆದಾರರನ್ನು ನಿಷೇಧಿಸಿರುವುದು) ಮತ್ತು ನರೇಗಾ ಅಧಿನಿಯಮದಲ್ಲಿ ಸೂಚಿಸಿರುವ ವಿಧಾನಗಳು (ಶೇಕಡಾ 50ರಷ್ಟು ಕಾಮಗಾರಿಗಳ ಮೌಲ್ಯದ ವೆಚ್ಚದ ಮೊತ್ತವನ್ನು ಅನುಷ್ಠಾನಕ್ಕಾಗಿ ಪಂಚಾಯತಿಗಳಿಗೆ ವಹಿಸುವುದು, ಕೂಲಿದರ, ಹಾಜರಾತಿ ಪಟ್ಟಿಗಳು, ಸಾಮಾಜಿಕ ಪರಿಶೋಧನೆ, ಇತ್ಯಾದಿ) ಇವುಗಳು ಅನ್ವಯವಾಗುತ್ತವೆ.

## *III. ಮಾಹಿತಿ ನಿರ್ವಹಣೆ ವ್ಯವಸ್ಥೆ (MIS)*

i. ಪ್ರಸ್ತುತ ನರೇಗಾ ತಂತ್ರಾಂಶದಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ 100 ದಿನಗಳಿಗೆ ಮೇಲ್ಪಟ್ಟು ಉದ್ಯೋಗವನ್ನು ಒದಗಿಸುವ ವಿವರಗಳನ್ನು ದಾಖಲಿಸಲು ಅನುಮತಿಸುವುದಿಲ್ಲ, ಏನಿದ್ದರೂ, ರಾಜ್ಯದಿಂದ ನಿರ್ದಿಷ್ಟವಾದ ಬೇಡಿಕೆ ಬಂದಲ್ಲಿ ಮಾತ್ರ. ಮೇಲೆ ತೆಗೆದುಕೊಂಡಿರುವ ತೀರ್ಮಾನದ ಹಿನ್ನೆಲೆಯಲ್ಲಿ ಅಧಿಸೂಚಿಸಿದ/ಘೋಷಿಸಿದ ಬರಪೀಡಿತ ತಾಲ್ಲೂಕುಗಳಲ್ಲಿ ಉದ್ಯೋಗವನ್ನು 150 ದಿನಗಳವರೆಗೆ ನೊಂದಾಯಿಸಿದ ಕುಟುಂಬಗಳಿಗೆ, ವಿವರವನ್ನು ದಾಖಲಿಸಲು, ನರೇಗಾ ತಂತ್ರಾಂಶವನ್ನು ಸೂಕ್ತವಾಗಿ ಬದಲಾಯಿಸಲು ಕ್ರಮವಹಿಸಲಾಗುತ್ತಿದೆ.

ii. 100 ದಿನಗಳವರೆಗೆ ನೀಡುವ ಉದ್ಯೋಗದ ವಿವರಗಳನ್ನು ದಾಖಲಿಸುವ ಹಾಲಿ ಇರುವ ವ್ಯವಸ್ಥೆಯ ಜೊತೆಗೆ, 100 ದಿನಗಳಿಗೆ ಮೇಲ್ಪಟ್ಟು ಹೆಚ್ಚುವರಿಯಾಗಿ 50 ದಿನಗಳವರೆಗೆ, ಉದ್ಯೋಗವನ್ನು ಒದಗಿಸುವ ಸಂಬಂಧ, ಕೂಲಿ ಮತ್ತು ಸಾಮಗ್ರಿಗಳಿಗೆ ತಗಲುವ ವೆಚ್ಚದ ವಿವರಗಳನ್ನು ಪ್ರತ್ಯೇಕವಾಗಿ ನರೇಗಾ ತಂತ್ರಾಂಶದಲ್ಲಿ ನಿರ್ವಹಿಸಲಾಗುವುದು.

### IV. ರಾಜ್ಯ ಉದ್ಯೋಗ ಖಾತರಿ ನಿಧಿ ಮತ್ತು ಲೆಕ್ಕಗಳ ಪರಿಶೋಧನೆ

ಕಾಲಕಾಲಕ್ಕೆ ಕೇಂದ್ರ ಸರ್ಕಾರದಿಂದ ಹೊರಡಿಸಿರುವ ಮಾರ್ಗಸೂಚಿಗಳು/ಸೂಚನೆಗಳು ಮತ್ತು ಅಧಿನಿಯಮದ ಉಹ ನಿಬಂಧನೆಗಳ ಪ್ರಕಾರ ರಾಜ್ಯ ಉದ್ಯೋಗ ಖಾತರಿ ನಿಧಿ ಸೇರಿದಂತೆ, ಯೋಜನೆಯ ಅನುದಾನವನ್ನು ಪರಿಶೋಧನೆಯನ್ನು ಮಾಡಿಸುವುದು. ರಾಜ್ಯ ಉದ್ಯೋಗ ಖಾತರಿ ನಿಧಿಯ ಮತ್ತು ಅನುಷ್ಠಾನ ಸಂಸ್ಥೆಗಳ ಲೆಕ್ಕಗಳನ್ನು ಪ್ರತ್ಯೇಕವಾಗಿ ತೋರಿಸಬೇಕು, 100 ದಿನಗಳ ಮಿತಿಯನ್ನು 150 ದಿನಗಳಿಗೆ ಹೆಚ್ಚಿಸಿರುವ ಪ್ರಯುಕ್ತ ತಗುಲಿದ ವೆಚ್ಚ ಮಾರ್ಗಸೂಚಿಗಳು/ಮಾರ್ಗಸೂತ್ರಗಳ ಪ್ರಕಾರ ಬಿಡುಗಡೆಯಾದ ಅನುದಾನವು ಬಳಕೆಯಾಗಿದೆಯೇ, ಎಂಬುದನ್ನು ಲೆಕ್ಕಪರಿಶೋಧಕರು ಧೃಡೀಕರಿಸಬೇಕು ಮತ್ತು ಅನುದಾನವನ್ನು ರಾಜ್ಯಗಳು, ರಾಜ್ಯ ಉದ್ಯೋಗ ಖಾತರಿ ನಿಧಿಯಲ್ಲಿ ಜಮ ಮಾಡಬೇಕಾಗಿರುವುದನ್ನು ಮಾಡಲಾಗಿದೆಯೇ, ಇಲ್ಲವೇ, ಎಂಬುದನ್ನು ಸಹ ದೃಢೀಕರಿಸಿಕೊಳ್ಳುವುದು.

ತಮ್ಮ ವಿಶ್ವಾಸಿ

ಸಹಿ/-XXX-

(ಅಪರಾಜಿತ ಸರಾಂಗಿ)

ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳು

ದೂರವಾಣಿ : 011-23383553

ಫ್ಯಾಕ್ಸ್ : 011-23388207

ಪ್ರತಿಯನ್ನು:

1. ಕಾರ್ಯದರ್ಶಿ ರೈತರ ಕಲ್ಯಾಣ ಮತ್ತು ಕೃಷಿ ಮಂತ್ರಾಲಯ ಭಾರತ ಸರ್ಕಾರ
2. ಹಿರಿಯ ನಿರ್ದೇಶಕರು (ತಾಂತ್ರಿಕ) NIC ಗ್ರಾಮೀಣಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು MISನಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಲು
3. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಗ್ರಾಮೀಣಾಭಿವೃದ್ಧಿ ಇಲಾಖೆಯ ನರೇಗಾ ಯೋಜನೆಯ ವಿಭಾಗದ ಎಲ್ಲಾ ಅಧಿಕಾರಿಗಳಿಗೆ/ಶಾಖೆಗಳಿಗೆ/ಸಮಾಲೋಚಕರಿಗೆ ಅಗತ್ಯ ಹಿಂಬಾಲಿಕೆ ಕ್ರಮ ತೆಗೆದುಕೊಳ್ಳಲು.

**ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ತರ್ಜುಮೆ ಮಾಡಿ ಧೃಡೀಕರಿಸಿದೆ.**

16/5

ಜಂಟಿ ನಿರ್ದೇಶಕರು(ತಾಂತ್ರಿಕ)

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ